**ಒ.ಎಸ್.ನಂಬ್ರ: 518/2021 ಪಿ .ಡಬ್ಲ್ಯೂ : 1**

ದಿನಾಂಕ: 02-04-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು: 2 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ. ಕೆ.ಸಿ.ಎಸ್ ವಕೀಲರಿಂದ**

ದಾವಾ ಸ್ವತ್ತು 1972 ರ ವಿಭಾಗ ಪತ್ರದ ಪ್ರಕಾರ ರುಕ್ಮಣಿ ರವರಿಗೆ ತನ್ನ ಹಿರಿಯರಿಂದ ಬಂದ ಸ್ವತ್ತುಗಳು ಎಂದರೆ ಸರಿ. ಅವರ ಕುಟುಂಬ ಅಳಿಯ ಸಂತಾನ ಪದ್ದತಿಯನ್ನು ಆಚರಿಸುವವರು ಎಂದರೆ ನನಗೆ ತಿಳಿದಿಲ್ಲ. 1996 ರಲ್ಲಿ ನಿಪಿ 14 ರಂತೆ ರುಕ್ಮಣಿ ರವರು ನನ್ನ ಗಂಡನ ಹೆಸರಿನಲ್ಲಿ ಕಂದಾವರ ಗ್ರಾಮದ ಸರ್ವೇ ನಂ 144 ರಲ್ಲಿ 2.70 ಎಕ್ರೆಯನ್ನು ಖರೀದಿಸಿದ್ದಾರೆ ಎಂದರೆ ಸರಿ . ಅದರ ಬಾಬ್ತು ನನ್ನ ಗಂಡ ಯಾವುದೇ ಕ್ರಯದ ಮೊಬಲನ್ನು ರುಕ್ಮಣಿ ರವರಿಗೆ ನೀಡಿಲ್ಲ ಎಂದರೆ ಸರಿಯಲ್ಲ . ಆದಾಗಿ 2011 ರಲ್ಲಿ ಕ್ರಯಪತ್ರದ ಮೂಲಕ ರೂ 1 ಕೋಟಿ 25 ಲಕ್ಷಕ್ಕೆ ಸದರಿ ಸ್ವತ್ತನ್ನು ನನ್ನ ಗಂಡ ಕ್ರಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಪ್ರಕಾರ ರೂ. 65 ಲಕ್ಷ ಕ್ಕೆ ಮಾರಾಟ ಮಾಡಿದ್ದಾರೆ ಎಂದು ಉತ್ತರಿಸಿರುತ್ತಾರೆ .

ದಾವಾ ಸ್ವತ್ತುಗಳನ್ನು ರುಕ್ಮಣಿರವರು 2 ರಿಂದ 4 ನೇ ಪ್ರತಿವಾದಿಯರ ಹೆಸರಿಗೆ ನೊಂದಾಯಿತ ದಾನಪತ್ರದ ಮೂಲಕ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. 2011 ರಲ್ಲಿಯೇ ದಾವಾ ಸ್ವತ್ತುಗಳ ಪಹಣಿಗಳು 2 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಬದಲಾವಣೆಯಾಗಿರುತ್ತದೆ ಎಂದರೆ ಸರಿ . ನನ್ನ ಗಂಡ 2017 ರಲ್ಲಿ ಪವತಿಯಾಗಿರುತ್ತಾರೆ . ಆದರೂ ಸದರಿ ಪಹಣಿ ಬದಲಾವಣೆಯನ್ನು ನನ್ನ ಗಂಡ ತನ್ನ ಜೀವಿತಾವದಿಯಲ್ಲಿ ಎಂದೂ ಪ್ರಶ್ನಿಸಿಲ್ಲ ಎಂದರೆ ಸರಿ . ರುಕ್ಮಣಿ ಶೆಡ್ತಿ ತಾನು ಪವತಿಯಾಗುವ 13 ವರ್ಷಗಳ ಹಿಂದಿನಿಂದ 2 ನೇ ಪ್ರತಿವಾದಯೊಂದಿಗೆ ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸಾಕ್ಷಿಯು ಎಷ್ಟು ವರ್ಷಗಳು ಎಂದು ಹೇಳಲು ಆಗುವುದಿಲ್ಲ ಎಂದು ಉತ್ತರಿಸಿರುತ್ತಾರೆ . ಆಕೆಯ ಆರೈಕೆಯನ್ನು 2 ಮತ್ತು 3 ನೇ ಪ್ರತಿವಾದಿಗಳು ಮಾತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ . ಆಕೆ ವಯೋಸಹಜ ಸಾವನ್ನಪ್ಪಿದ್ದಾರೆ ಎಂದರೆ ಸರಿ . ಆಕೆ ಮಾನಸಿಕವಾಗಿ ಸದೃಢವಾಗಿದ್ದರು ಎಂದರೆ ಸರಿಯಲ್ಲ. ಕೈ ನಡಕನ್ನು ಹೊರತುಪಡಿಸಿ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ಕಾಲು ನೋವಿನಿಂದ ನಡೆಯಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆಕೆ ಯಾವುದೇ ಚಿಕಿತ್ಸೆಯನ್ನು ಪಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ . ಆಕೆ ಯಾವ ಆಸ್ಪತ್ರೆಯಲ್ಲಿ ಯಾವಾಗ ದಾಖಲಾಗಿದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ .

ಕಂದಾವರ ಗ್ರಾಮದ 2.70 ಎಕ್ರೆ ಆಸ್ತಿಯನ್ನು ನನ್ನ ಗಂಡನಿಗೆ ಮಾಡಿಕೊಟ್ಟ ರೀತಿಯಲ್ಲಿ ದಾವಾ ಸ್ವತ್ತುಗಳು ರುಕ್ಮಣಿ ರವರು ತನ್ನ ಹೆಣ್ಣು ಮಕ್ಕಳ ಭಾಗಕ್ಕೆ ಹೋಗಬೇಕೆಂದು ಇಚ್ಚಿಸಿದ್ದರು ಎಂದರೆ ಸರಿಯಲ್ಲ . 2 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ರುಕ್ಮಣಿ ಶೆಡ್ತಿರವರು ದಾನಪತ್ರ ಮಾಡಿರುವ

ವಿಚಾರ ನನ್ನ ಗಂಡನಿಗೆ ತಿಳಿದಿದ್ದರೂ ಕಂದಾವರ ಗ್ರಾಮದ ಆಸ್ತಿ ತನಗೆ ನೀಡಿದ್ದ ಕಾರಣ ಸದರಿ ದಾನವನ್ನು ಆತ ಎಂದಿಗೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ರುಕ್ಮಣಿ ರವರು 2 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಮಾಡಿಕೊಟ್ಟಿರುವ ದಾನ ಪತ್ರ ಕಾನೂನಿನಲ್ಲಿ ಊರ್ಜಿತ ಎಂದರೆ ಸರಿಯಲ್ಲ . ರುಕ್ಮಣಿ ಶೆಡ್ತಿರವರ ಅಂತ್ಯಕ್ರಿಯೆ ಬೆಂಗಳೂರಿನಲ್ಲಿ ನಡೆದಿದೆ ಎಂದರೆ ಸರಿ. ದಾನಪತ್ರದ ಪ್ರಕಾರ 2 ರಿಂದ 4 ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತುಗಳು ದಾನವಾಗಿರುವ ಕಾರಣ ಅದರಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾನಪತ್ರದಲ್ಲಿ ಕಂಡುಬರುವ ಹೆಬ್ಬೆಟ್ಟಿನ ಗುರುತು ರುಕ್ಮಣಿ ಶೆಡ್ತಿ ರವರದ್ದು ಎಂದರೆ ಸರಿಯಲ್ಲ. ರುಕ್ಮಣಿ ಶೆಡ್ತಿ ರವರ ಹೆಬ್ಬೆಟ್ಟಿನ ಗುರುತು ಇರುವ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ನಿಪಿ 14 ರ ಮೂಲ ಪ್ರತಿ ನನ್ನ ಬಳಿ ಇದೆಯಾ ಎಂದು ನನಗೆ ತಿಳಿದಿಲ್ಲ . ಅದನ್ನು ಹಾಜರುಪಡಿಸಬಹುದಾ ಎಂದು ನೋಡಬೇಕು . 2 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಮಾಡಿಕೊಟ್ಟಿರುವ ದಾನಪತ್ರವು ಊರ್ಜಿತವಲ್ಲ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ . ಯಾವುದೇ ಪಾಲು ಇಲ್ಲವಾದರೂ ಸುಳ್ಳು ದಾವೆ ಸಲ್ಲಿಸಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**